ತೆರೆದ ಅಂಚೆ

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು 570 004

# ರಜತ ಮಹೋತ್ಸವ ಉದ್ಘಾಟನೆ

**15 ಸೆಪ್ಟೆಂಬರ್ 2026**

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು 570 004

25ನೇ ವಾರ್ಷಿಕೋತ್ಸವ

## ರಜತ ಮಹೋತ್ಸವ ಉದ್ಘಾಟನೆ

**15 ಸೆಪ್ಟೆಂಬರ್ 2026 * ಮಂಗಳವಾರ * ಬೆಳಗ್ಗೆ 11.00**

ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ

ಜೆಎಸ್‌ಎಸ್ ಆಸ್ಪತ್ರೆ * ಮೈಸೂರು

**ದಿವ್ಯ ಸಾನ್ನಿಧ್ಯ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಉದ್ಘಾಟನೆ**

**ಶ್ರೀ ಬಸವರಾಜ ರಾಯರೆಡ್ಡಿ**

ಉನ್ನತ ಶಿಕ್ಷಣ ಸಚಿವರು

**ಅಧ್ಯಕ್ಷತೆ**

**ಶ್ರೀ ಪಿ.ಎಂ. ನರೇಂದ್ರಸ್ವಾಮಿ**

ಕೃಷಿ ಸಚಿವರು

**ಮುಖ್ಯ ಅತಿಥಿಗಳು**

**ಪ್ರೊ. ಎನ್.ಕೆ. ಲೋಕನಾಥ್**

ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ

**ಸರ್ವರಿಗೂ ಆದರದ ಸುಸ್ವಾಗತ**

ಪ್ರಾಂಶುಪಾಲರು, ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯನ್ನು 2001ರಲ್ಲಿ ಪ್ರಾರಂಭಿಸಲಾಯಿತು. ಆರಂಭದಲ್ಲಿ ಸ್ನಾತಕ ಪದವಿಗೆ 20 ಪ್ರವೇಶಾತಿ ನಿಗದಿಯಾಗಿತ್ತು. ನಂತರದ ವರ್ಷಗಳಲ್ಲಿ 40ಕ್ಕೆ ಹೆಚ್ಚಿಗೆಯಾಯಿತು. 2006ರಲ್ಲಿ ಭಾಷರೋಗ ಶಾಸ್ತ್ರ ಮತ್ತು ಶ್ರವಣಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲಾಯಿತು. ಪಿಹೆಚ್.ಡಿ ಸಂಶೋಧನೆಗೂ ಅವಕಾಶವಿದೆ. ಸಂಸ್ಥೆಯು ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ. ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಮಾನ್ಯತೆ ಪಡೆದಿದೆ.

ಶೈಕ್ಷಣಿಕ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಹೊಸ ಗುಣಮಟ್ಟದ ಸಂಶೋಧನೆಗಳಲ್ಲಿ ಸದಾ ಕ್ರಿಯಾಶೀಲವಾಗಿದೆ. ವೃತ್ತಿಪರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸೆಮಿನಾರ್‌ಗಳು, ಸಿಆರ್‌ಇ ಕಾರ್ಯಕ್ರಮಗಳು ಹಾಗೂ ಕಾರ್ಯಗಾರಗಳು ಮೊದಲಾದವುಗಳನ್ನು ಆಯೋಜಿಸಲಾಗುತ್ತಿದೆ. ಭೋದಕರು ಮತ್ತು ವಿದ್ಯಾರ್ಥಿಗಳ ಪ್ರಬಂಧಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ಶೈಕ್ಷಣಿಕ ಗುಣಮಟ್ಟಕ್ಕೆ ಕ್ಯುಎಸ್-ಐ ಗೇಜ್‌ನಿಂದ ಪ್ರತಿಷ್ಠಿತ ಗೋಲ್ಡ್ ರೇಟಿಂಗ್‌ನ್ನು ಪಡೆದಿದೆ.

ಸಂಸ್ಥೆಯು ಸಾರ್ವಜನಿಕ ಸೇವೆಯನ್ನು ಮುಖ್ಯ ಉದ್ದೇಶವನ್ನಾಗಿ ಹೊಂದಿದೆ. ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಂಶೋಧನೆ, ಚಿಕಿತ್ಸೆ ಮತ್ತು ಸಮುದಾಯ ಆರೋಗ್ಯ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಚಿತ ತಪಾಸಣಾ ಶಿಬಿರಗಳು, ಶ್ರವಣ ಸಾಧನಗಳ ವಿತರಣೆ, ಅಡಿಪ್ ಮತ್ತು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಂತಹ ಯೋಜನೆಗಳಡಿಯಲ್ಲಿ ಕಾಕ್ಲಿಯರ್ ಇಂಪ್ಲ್ಯಾಂಟ್‌ನಂತಹ ಶಸ್ತ್ರಚಿಕಿತ್ಸಾ ಸೇವೆಗಳನ್ನು ನೀಡಲಾಗುತ್ತಿದೆ. ಗುಣಮಟ್ಟದ ಚಿಕಿತ್ಸೆಯ ಕಾರಣಕ್ಕಾಗಿ ವೈದ್ಯಕಿಯ ಸೇವೆ ಪಡೆಯುತ್ತಿರುವ ರೋಗಿಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚುತ್ತಿರುವುದು ಸಂಸ್ಥೆಯ ಸೇವಾ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ.

ರಜತ ಮಹೋತ್ಸವವದ ಅಂಗವಾಗಿ ವರ್ಷವಿಡೀ ಹಲವಾರು ಶೈಕ್ಷಣಿಕ, ವೃತ್ತಿಪರ ಹಾಗೂ ಸಾಮಾಜಿಕ ಕಾಳಜಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಉಚಿತ ತಪಾಸಣೆ ಮತ್ತು ಪುನರ್ವಸತಿ ಶಿಬಿರಗಳು, ಶ್ರವಣ ಸಾಧನಗಳ ವಿತರಣೆ, ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ, ವಿದ್ಯಾರ್ಥಿಗಳು, ವೈದ್ಯರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಕೌಶಲಭರಿತ ಕಾರ್ಯಾಗಾರಗಳು ಮುಂತಾದ ಮೌಲ್ಯಯುತ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ.